ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಇತರ ಕಲವು ವರ್ಷಗಳಿಂದ ಬಾಕಿಯಿದ್ದ ಅರ್ಜಿಗಳು ಇನ್ನೂ ಇತ್ಯರ್ಥವಾಗದೇ ಇರುವುದರಿಂದ, ತಾವು ರಚಿಸಲಿರುವ ನಿಯಮಗಳು ಅವುಗಳಿಗೂ ಕೂಡ ಅನ್ವಯವಾಗುವಂತಹುದೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್ ಮತ್ತು ಕರ್ನಾಟಕ ನ್ಯಾಯ ಮಂಡಳಿಯ ಆದೇಶಗಳ ಹಿನ್ನೆಲೆಯಲ್ಲಿ ಈ ನಿಯಮಾವಳಿಗಳ ಪ್ರಕಾರ ಯಾರು ಅದರ ಅಂಕಿತದಲ್ಲಿ ಬರುವುದಿಲ್ಲವೋ ಅವರ ಅರ್ಜಿಗಳನ್ನು ಪುರಸ್ಕಾರ ಮಾಡಲಿಕ್ಕಾಗುವುದಿಲ್ಲ.

ರಾಜ್ಯಕ್ಕೆ ವಿದೇಶಿಯರ ಅನಧಿಕೃತ ಪ್ರವೇಶ.

139 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಅನಧಿಕೃತವಾಗಿ ಬಂದಿರುವ ವಿದೇಶಿಯರನ್ನು ಗುರುತಿಸಲು ಕಾರ್ಯ ಯೋಜನೆಯನ್ನು ಪೋಲೀಸ್ ಇಲಾಖೆ ಹಾಕಿಕೊಂಡಿದೆಯೇ?

ಆ) ಮಾಡಿದ್ದಲ್ಲಿ ಎಷ್ಟು ಜನರ ಅಕ್ರಮ ವಿದೇಶಿಯರನ್ನು ಗುರುತಿಸಲಾಗಿದೆ?

ಇ) ಗುರುತಿಸಲ್ಪಟ್ಟವರಲ್ಲಿ ಯಾವ ಯಾವ ದೇಶದವರು ಎಷ್ಟಷ್ಟು?

ಈ) ಇವರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು) :

ಅ) ಹೌದು.

ಆ) 7 (ಏಳು)

ಇ) ಶ್ರೀಲಂಕಾ - 4

ಟಿಬೇಟಿಯನ್ನ - 3

ಈ) ಈ 7 ಮಂದಿ ವಿದೇಶಿಯರ ಮೇಲೆ ವಿದೇಶಿಯರ ಅಧಿನಿಯಮ ೧೯೪೬ರ ಅನ್ವಯ ಕ್ರಮ ಜರುಗಿಸಲಾಗಿದೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಂದ ಉತ್ತರ ನನಗೆ ಬಂದಿದೆ. ಆದರೆ ಸಮಂಜಸವಾದಂತಹ ಉತ್ತರ ಇದರಲ್ಲಿ ಇಲ್ಲ ಎಂದು, ನನ್ನ ಭಾವನೆ. ಇದಕ್ಕೆ ಕಾರಣ ಏನೆಂದರೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಫಾರಿನ್ ಇನಫಿಲಟ್ರೇಟರ್ಸ ಹೆಚ್ಚಿಗೆ ಬರುತ್ತಿದ್ದಾರೆ, ಇಡೀ ದೇಶದಲ್ಲಿ ಕರ್ನಾಟಕ ಇದರ ಕೇಂದ್ರವಾಗಿದೆ, ಆ ದೃಷ್ಟಿಯಲ್ಲಿ ಜಾಗೃತವಾಗಿರಬೇಕು ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವುದಾದರೂ ಕೂಡ ಸೂಚನೆಗಳು ತಮಗೆ ಬಂದಿವೆಯೇ ಎಂಬ ಬಗ್ಗೆ ಮಾನ್ಯ ಗೃಹ ಸಚಿವರು ತಿಳಿಸಬೇಕು. ಎರಡನೆಯದಾಗಿ, ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು,

ಹುಬ್ಬಳ್ಳಿ, ಮೈಸೂರು ಮತ್ತು ಭಟ್ಕಳ ಪ್ರದೇಶಗಳಲ್ಲಿ ಅಕ್ರಮವಾಗಿ ಬಂದು ನೆಲಸಿರುವಂತೆ ವಿದೇಶಿಯರು ದೇಶಕ್ಕೆ ಆತಂಕ ಮಾಡುತ್ತಿದ್ದಾರೆ, ಇದರ ಬಗ್ಗೆ ಹೆಚ್ಚಿನ ಜಾಗೃತಿ ಇರಬೇಕು ಎಂಬುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಸೂಚನೆಗಳು ಬಂದಿವೆ ಎಂಬ ವಿಚಾರಗಳು ಇವೆ. ಇದರ ಜೊತೆಗೆ 1996ನೇ ಸಾಲಿನಲ್ಲಿ ಈ ಪ್ರದೇಶಗಳಲ್ಲಿ ಹೊರಗಡೆಯಿಂದ ಬಂದಂತಹವರ ಸಂಖ್ಯೆ ಜಾಸ್ತಿಯಿದೆ ಎಂಬುದರ ಬಗ್ಗೆ ಮಾಹಿತಿ ಸರ್ಕಾರಕ್ಕೆ ಇದೆಯೇ? ಎಂಬುದರ ಬಗ್ಗೆ ನಾನು ಸರ್ಕಾರಕ್ಕೆ ಕೇಳಲಿಚ್ಛಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರವಾನ್ವಿತ ಸದಸ್ಯರಿಗೆ ಈ ವಿದೇಶಿಯರು ಯಾವ ರೀತಿ ಬರುತ್ತಾರೆ ಎಂಬುದರ ಬಗ್ಗೆ ಬಹುಶಃ ಸರಿಯಾದ ಮಾಹಿತಿ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು : ಈ ಬಗ್ಗೆ ಬಹಳ ಡೀಟೈಲ್ ರಿಪ್ಲೈ ಕೊಡುವುದು ಬೇಡ. ಅವರು ಕೇಳಿದ ಪ್ರಶ್ನೆಗಳಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಹೇಳಿಬಿಡಿ. ನಿಮ್ಮ ಹತ್ತಿರ ಜಾಸ್ತಿ ಮಾಹಿತಿ ಇದ್ದೇ ಇರುತ್ತದೆ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನನ್ನ ಹತ್ತಿರ ಎಲ್ಲಾ ಮಾಹಿತಿ ಇದೆ.

ಅಧ್ಯಕ್ಷರು : ಎಲ್ಲಾ ಮಾಹಿತಿಗಳನ್ನು ಕೊಡುತ್ತಾ ಹೋದರೆ ಸಮಯ ಹೆಚ್ಚು ವ್ಯಯವಾಗುತ್ತದೆ. ಆದ್ದರಿಂದ ಎಲ್ಲಾ ಮಾಹಿತಿ ನೀಡುವುದು ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹಾಗಾದರೆ ನಾನು ನೇರವಾಗಿ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರಿಸುತ್ತೇನೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಕಾಲ ಕಾಲಕ್ಕೆ ಸೂಚನೆಗಳು ಬರುತ್ತಲೇ ಇರುತ್ತವೆ. ವಿದೇಶಿಯರು ರಾಜ್ಯಕ್ಕೆ ಬರುವ ಬಗ್ಗೆ ಹಾಗೂ ಹೋಗುವುದರ ಬಗ್ಗೆ ನೇರವಾದ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆರಡಕ್ಕೂ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ಹುಬ್ಬಳ್ಳಿಯಲ್ಲಾಗಲೀ, ಮೈಸೂರಿನಲ್ಲಾಗಲೀ, ಭಟ್ಕಳದಲ್ಲಾಗಲೀ, ಬೆಂಗಳೂರಿನಲ್ಲಾಗಲೀ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿಯರು ಬಂದಿರತಕ್ಕಾಂಥದ್ದು ಇಲ್ಲ. ಅಧಿಕೃತವಾಗಿ ಜನ ಬಂದಿದ್ದಾರೆ. ಪರ್ಮನೆಂಟ್ ವೀಸಾ ಇಟ್ಟುಕೊಂಡಿರುವವರು ಬರುತ್ತಾರೆ. ಟೆಂಪರರಿ ವೀಸಾ ಇಟ್ಟುಕೊಂಡಿರುವವರು ಬರುತ್ತಾರೆ, ಹೋಗುತ್ತಾರೆ. ಅದರ ಪಾಡಿಗೆ ಅದು ನಡೆಯುತ್ತಿರುತ್ತದೆ. ಯಾರೂ ವೀಸಾ ಇಲ್ಲದೆ ಅಥವಾ ಫೋರ್ಜರಿ ವೀಸಾ ತೆಗೆದುಕೊಂಡು, ಫೋರ್ಜರಿ ಪಾಸಪೋರ್ಟ್ ತೆಗೆದುಕೊಂಡು ಬಂದಿರತಕ್ಕಂತಹವರು ಕಳೆದ ಎರಡು ವರ್ಷಗಳಲ್ಲಿ ಇದುವರೆಗೆ ಪತ್ತೆ ಆಗಿರತಕ್ಕಂಥದ್ದು ಏಳು ಜನ. ಇದರಲ್ಲಿ ನಾಲ್ಕು ಜನ ಶ್ರೀಲಂಕಾದವರು ಇದ್ದಾರೆ, ಮೂರು ಜನ ಟಿಬೇಟಿಯನರು ಇದ್ದಾರೆ. ಅವರ ಮೇಲೆ ಕಾನೂನು ಪ್ರಕಾರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದು ಕೇಂದ್ರ ಸರ್ಕಾರದಿಂದ ನಿಮಗೆ ಬಂದಿದೆಯಾ? ವಿಶೇಷವಾಗಿ ಕರ್ನಾಟಕ್ಕೆ ಬಂದಿದೆ ಅನ್ನುವುದರ ಬಗ್ಗೆ ಮಾಹಿತಿ ನನ್ನ ಹತ್ತಿರ ಇದೆ. ಅದರ ಬಗ್ಗೆ ನಾನು ಪ್ರಶ್ನೆ ಕೇಳುತ್ತಿದ್ದೇನೆ. ಇಡೀ ದೇಶದಲ್ಲಿ ಕರ್ನಾಟಕದ ಕಡೆಗೆ ಈ ರೀತಿಯಾದ ಸಮಸ್ಯೆಗಳು ಹೆಚ್ಚಾಗಿದೆ. ಈ ಸೂಚನೆ ಅದು ಹೋಮ್ ಮಿನಿಸ್ಟರ್ ಆಫೀಸಿನಿಂದ ಇಲ್ಲಿಗೆ ಬಂದಿದೆ

ಎನ್ನುವ ವಿಚಾರ ಇದೆ. ಅದರ ಬಗ್ಗೆ ಕೂಡ ಮಾಹಿತಿ ಇದೆ. ಫೆಬ್ರವರಿ ತಿಂಗಳಲ್ಲಿ ಆ ಮಾಹಿತಿ ಬಂದಿದೆ. ಅದರ ಬಗ್ಗೆ ಏತಕ್ಕೆ ವಿಚಾರ ಹೇಳುತ್ತಿಲ್ಲ ಎಂದು ನಮಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಇದು ದೇಶದ ಮತ್ತು ರಾಜ್ಯದ ಸೆಕ್ಯುರಿಟಿ ಪ್ರಶ್ನೆ ಆಗಿರುವುದರಿಂದ ನಾನು ಪ್ರಶ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಸೆಕ್ಯುರಿಟಿಗೆ ಅವರು ಏಕೆ ಬಂದು ಮಾಡಬೇಕು, ಇಲ್ಲಿ ಇರುವವರೇ ಸಾಕು ಸೆಕ್ಯುರಿಟಿ ಮಾಡುವುದಕ್ಕೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಎಷ್ಟೊಂದು ಕಳಕಳಿ ಇದೆ ದೇಶದ ಭದ್ರತೆ ಬಗ್ಗೆ ಅಷ್ಟೇ ಸರ್ಕಾರಕ್ಕೂ ಇದೆ. ಕೇಂದ್ರ ಸರ್ಕಾರದಿಂದ ಆಗಾಗ್ಗೆ ಸೂಚನೆಗಳ ಬರುತ್ತಿರುತ್ತವೆ.

ಅಧ್ಯಕ್ಷರು : ವಿಶೇಷವಾಗಿ ಕರ್ನಾಟಕ್ಕೆ ಬಂದಿದೆಯೇ? ಪೇಪರನಲ್ಲಿ ಬಂದಿರುವುದು ಅಲ್ಲ, ಮಂತ್ರಿಗಳು ಬಂದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ರಾಮದಾಸ್ : ಪಿ.ಟಿ.ಐ. ನವರು ಒಂದು ಪ್ರೆಸನಲ್ಲಿ ಹೇಳಿದ್ದಾರೆ. ಡೈರೆಕ್ಟರ್ ಆಫ್ ಜನರಲ್ ಅವರಿಗೆ ಕರ್ನಾಟಕದ...

ಅಧ್ಯಕ್ಷರು : ಹಾಗಾದರೆ ಒಂದು ಕೆಲಸ ಮಾಡಿ ನೀವು, ಅವರ ಮೇಲೆ ಒಂದು ಪ್ರಿವಿಲೇಜ್ ಕೊಡಿ. If he has said a thing which is far from truth as Minister, you move a privilege against him.

ಶ್ರೀ ಎ. ರಾಮದಾಸ್ : ಆಗಲಿ ಅದನ್ನೇ ಮಾಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆಯೇ ಬೆಂಗಳೂರಿನಲ್ಲಿ ಹಿಂದಿನ ಸಾರಿ ಶಿವರಸನ್‌ನನ್ನು ಹಿಡಿದರು. ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಇರುವುದರಿಂದ ಆ ಏರಿಯಾದಲ್ಲಿ ಯಾರು ಹೊಸಬರು ಬಂದಿದ್ದಾರೆ, ಯಾರು ಹೊಸಬರು ಹೋಗುತ್ತಿದ್ದಾರೆ ಎಂದು ಇನಫರ್ಮೇಷನ್ ಪೋಲಿಸನವರಿಗೂ ಕೂಡ ತೆಗೆದುಕೊಳ್ಳಲು ತುಂಬಾ ಕಷ್ಟವಾಗಿದೆ. ಅವರು ಕಳೆದ ಒಂದು ವರ್ಷದಿಂದ ಹೇಳುತ್ತಿದ್ದಾರೆ, ಎಷ್ಟೋ ಸಾವಿರ ಪೋಲಿಸರನ್ನು ನೇಮಕ ಮಾಡುತ್ತೇವೆಂದು.

ಅಧ್ಯಕ್ಷರು : ನಾವು ಶಾಸಕರಾಗಿ ಮಾತನಾಡುವಾಗ ಎಲ್ಲಾ ವಿಷಯದ ಪರಿಚಯವಿರಬೇಕು. ಬೇರೆ ದೇಶದವರು ಈ ದೇಶದ ಸರಹದ್ದಿನಲ್ಲಿ ಬರಬೇಕಾದರೆ, ಅವನಿಗೆ ಸೆಂಟ್ರಲ್ ಗವರ್ನಮೆಂಟನಿಂದ ಅನುಮತಿ ಪಡೆದುಕೊಂಡು ವೀಸಾ ತೆಗೆದುಕೊಂಡು ಬರಬೇಕಾಗುತ್ತದೆ. ವೀಸಾ ಇಲ್ಲದೆ ಬಂದಿರತಕ್ಕಂತಹವರು, ಅನುಮತಿ ಇಲ್ಲದೆ ಬಂದಿರತಕ್ಕಂತಹವರು ಅದಕ್ಕೆ ಉತ್ತರವಾಗಿ ಅವರು ಅವರ ದಾಖಲೆಯ ಪ್ರಕಾರ ಏಳು ಜನ ಎಂದು ಹೇಳಿದ್ದಾರೆ. ಹೆಚ್ಚಿಗೆ ಜನ ಇದ್ದರೆ ಇಂತಹ

ಊರಿನಲ್ಲಿದ್ದಾರೆಂದು ಹೇಳಿ. Immediately we will ask them to take them into custody.

ಶ್ರೀ ಅರಗ ಜ್ಞಾನೇಂದ್ರ : ಅವರ ಸಿಬ್ಬಂದಿ ವರ್ಗ ಜಾಸ್ತಿ ಮಾಡದೇ ಹೋದರೆ ಇದನ್ನು ಗುರುತಿಸುವಂತದ್ದು ಕಷ್ಟ.

ಅಧ್ಯಕ್ಷರು : ಅವರು ಅವರ ಸಿಬ್ಬಂದಿ ಇರುವ ವ್ಯವಸ್ಥೆಯಲ್ಲಿ ಗುರುತಿಸಿರುವ ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆ. ಹೆಚ್ಚಿಗೆ ಮಾಹಿತಿ ನಿಮ್ಮ ಹತ್ತಿರವಿದ್ದರೆ, ಅವರ ಗಮನಕ್ಕೆ ಬಾರದಿದ್ದರೆ, ಅವರಿಗೆ ಮಾಹಿತಿ ಕೊಡಿ ತ್ವರಿತವಾಗಿ ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಕರ್ನಾಟಕದ ನೆಮ್ಮದಿ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇನ್ನು ಈ ರೀತಿ ಆಗಬಾರದು.

ಅಧ್ಯಕ್ಷರು : ನಾನು ಅದೇ ಹೇಳಿದ್ದುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ನೆಮ್ಮದಿ ಇದೆ. ಆದರಲ್ಲಿ ಏನೂ ತೊಂದರೆ ಇಲ್ಲ. ನಮ್ಮ ರಾಜ್ಯಕ್ಕೆ ವಿಶೇಷವಾಗಿ ಯಾವುದೇ ತರಹದ ಸೂಚನೆ ಬಂದಿಲ್ಲ.

MR. SPEAKER : Besides that also I share the anxiety of the Hon'ble Members. If they have any valid information to say that whatever information that you have given as incorrect, they are at liberty to meet the Hon'ble Minister either in private or on the floor of the House, give the information, you can immediately ask your men to get into the job and secure those follows who are in this country with out valid Visa.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ಎಲ್ಲಾ ರಾಜ್ಯಗಳಿಗೆ ಸೂಚನೆ ಬರುವ ಹಾಗೆ ನಮ್ಮ ರಾಜ್ಯಕ್ಕೂ ಬಂದಿದೆ ಹೊರತು, ವಿಶೇಷವಾಗಿ ಬಂದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಭಟ್ಕಳದಲ್ಲಿ ಈ ರೀತಿ ಬಂದರು. ಅವರು ಯಾವುದೋ ಫೋರ್ಜರಿ ವೀಸಾ ಮಾಡಿಕೊಂಡು ಇತ್ಯಾದಿಗಳನ್ನು ಮಾಡಿಕೊಂಡು ಬಂದು ನೆಲಸಿ, ಅಲ್ಲಿ ಭಯೋತ್ಪಾದನೆಯಂತಹ ಅಥವಾ ಅಕ್ರಮವಾದಂತಹ ಚಟುವಟಿಕೆ ನಡೆಸುತ್ತಾ ಇರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಇದು ಇಡೀ ರಾಜ್ಯವ್ಯಾಪಿ ಆಗಿರುವುದರಿಂದ ಇದರ ಬಗ್ಗೆ ಹೋಮ್ ಡಿಪಾರ್ಟಮೆಂಟ್ ಸ್ವಲ್ಪ ಗಂಭೀರವಾಗಿ ತನ್ನ ತನಿಖಾ ದಳವನ್ನು ಚುರುಕುಗೊಳಿಸುವ ಅಗತ್ಯತೆ ಇದೆ ಅನ್ನತಕ್ಕಂಥದ್ದು ನಮ್ಮ ಅನಿಸಿಕೆ.

MR. SPEAKER : The question does not merit a reply.

ಘಟಪ್ರಭಾ ಎಡದಂಡೆ ಕಾಲುವೆಯ ದುರಸ್ತಿ ಕಾಮಗಾರಿ.